# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 186 (1368) |
| ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-03-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಕೊಡಗುಜಿಲ್ಲೆಯ ಮಡಿಕೇರಿ ನಗರಸಭೆಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಮಳೆಹಾನಿ ಕಾಮಗಾರಿಗಳ ಸಂಖ್ಯೆ ಎಷ್ಟು; ಸದರಿ ಕಾಮಗಾರಿಗಳಿಗೆ ವಿನಿಯೋಗಿಸಿರುವ ಅನುದಾನವೆಷ್ಟು; (ವರ್ಷವಾರು ಹಾಗೂ ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಮಳೆಹಾನಿ ಕಾಮಗಾರಿಗಳ ಸಂಖ್ಯೆ, ವಿನಿಯೋಗಿಸಿರುವ ಅನುದಾನ ಹಾಗೂ ಕಾಮಗಾರಿವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಮಳೆಹಾನಿ ಕಾಮಗಾರಿಯಡಿ ಕೈಗೆತ್ತಿಕೊಂಡಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ; | 2018-19ನೇ ಸಾಲಿನ ಆಗಸ್ಟ್ ತಿಂಗಳಿನಲ್ಲಿ ಬಿದ್ದ ಭಾರಿ ಮಳೆಯಿಂದ ಪ್ರವಾಹ ಮತ್ತು ಭೂಕುಸಿತ ಉಂಟಾಗಿದ್ದರಿಂದ ಪ್ರವಾಹ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ಮಂಜೂರಾಗಿದ್ದ ರೂ.292.00 ಲಕ್ಷಗಳ ಅನುದಾನದಡಿ ಒಟ್ಟು 05 ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿ ಎಲ್ಲಾ 05 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>2019-20ನೇ ಸಾಲಿನ ಆಗಸ್ಟ ತಿಂಗಳಿನಲ್ಲಿ ಉಂಟಾದ ಅತಿವೃಷ್ಟಿಯಿಂದ ಆದ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಹಾನಿಯಾದ ಸಾರ್ವಜನಿಕರ ರಸ್ತೆ, ಸೇತುವೆ, ತಡೆಗೋಡೆ ಕಟ್ಟಡ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ದುರಸ್ಥಿ/ಪುನರ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾದ ರೂ.646.00 ಲಕ್ಷಗಳ ಅನುದಾನದಡಿ ಒಟ್ಟು 05 ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿ ಈ ಪೈಕಿ ರೂ350.00 ಲಕ್ಷಗಳ ಮೊತ್ತದ 04 ಕಾಮಗಾರಿಗಳು ಪೂರ್ಣಗೊಂಡಿದ್ದು, ರೂ.296.00 ಲಕ್ಷಗಳ ಮೊತ್ತದ 01 ಕಾಮಗಾರಿಯು ಪ್ರಗತಿಯಲ್ಲಿದ್ದು ಶೇ50ರಷ್ಟು ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| ಇ) | ಮಳೆಹಾನಿಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಕೆಲವು ಇಂದಿಗೂ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದಕ್ಕೆ ಕಾರಣಗಳೇನು? | 2019-20ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಆದ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಹಾನಿಯಾದ ರಸ್ತೆ, ಸೇತುವೆ, ತಡೆಗೋಡೆ ಹಾಗೂ ಚರಂಡಿ ದುರಸ್ಥಿ / ನಿರ್ಮಾಣ ಸಂಬಂಧ ಮಡಿಕೇರಿ ನಗರಸಭಾ ವ್ಯಾಪ್ತಿಯ ಹಳೇ ಖಾಸಗಿ ಬಸ್ ನಿಲ್ದಾಣದ ತಡೆಗೋಡೆ ಕಾಮಗಾರಿ ಅಂದಾಜು ವೆಚ್ಚ ರೂ.296.00 ಲಕ್ಷಗಳು ಮೊತ್ತದ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯಕತೆ ಇರುವುದರಿಂದ ಕೆ.ಟಿ.ಪಿ.ಪಿ ಕಾಯ್ದೆ 2009 ರಂತೆ ಟೆಂಡರ್ ಕರೆದು ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಬಿಡ್‌ನ್ನು ದಿ: 19-09-2020 ರಂದು ಹಾಗೂ ಆರ್ಥಿಕ ಬಿಡ್‌ನ್ನು ದಿ: 15-10-2020 ರಂದು ಅನುಮೋದನೆ ಪಡೆದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿ ಪ್ರಸ್ತುತ ಶೇ50ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. |

ಕಡತ ಸಂಖ್ಯೆ:ನಅಇ 152 ಎಸ್.ಎಫ್.ಸಿ 2021

(ಎನ್. ನಾಗರಾಜ್, ಎಂ.ಟಿ.ಬಿ)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು

## ಅನುಬಂಧ – 1

### 2018-19ನೇ ಸಾಲಿನಲ್ಲಿ ಮಡಿಕೇರಿ ನಗರಸಭೆಗೆ ಮಂಜೂರಾಗಿರುವ ಮಳೆ ಹಾನಿ ಅನುದಾನದಡಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ

| 2018-19ನೇ ಸಾಲಿನ ಕಾಮಗಾರಿಗಳ ವಿವರ | | | |
|---|---|---|---|
| ಕ್ರ.ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಕಾಮಗಾರಿ ಹಂತ |
| 1 | ಮಡಿಕೇರಿ ನಗರಸಭಾ ವ್ಯಾಪ್ತಿಯ ಕಾಲೇಜ್ ರಸ್ತೆಯಿಂದ ಬಾಲಭವನಕ್ಕೆ ಹೋಗುವ ರಸ್ತೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ | 15.00 | ಪೂರ್ಣಗೊಂಡಿದೆ |
| 2 | ಮಡಿಕೇರಿ ನಗರಸಭಾ ವ್ಯಾಪ್ತಿಯ ವಿದ್ಯಾನಗರ ಮುಖ್ಯ ರಸ್ತೆಯಲ್ಲಿ ಮತ್ತು ರೈಪಲ್‌ರೇಂಜ್ ಹತ್ತಿರ ಕುಡಿಯುವ ನೀರಿನ ಪೈಪ್‌ಲೈನ್ ದುರಸ್ಥಿ ಕಾಮಗಾರಿ | 40.00 | ಪೂರ್ಣಗೊಂಡಿದೆ |
| 3 | ಮಡಿಕೇರಿ ನಗರಸಭಾ ವ್ಯಾಪ್ತಿಯ ಸಂಪಿಗೆಕಟ್ಟೆಯಿಂದ ಬನ್ನಿಮಂಟಪಕ್ಕೆ ಹೋಗುವ ರಸ್ತೆಯಲ್ಲಿ ಸ್ಯಾಂಡ್ ಬ್ಯಾಗ್ಸ್ ಅಳವಡಿಸುವ ಕಾಮಗಾರಿ | 50.00 | ಪೂರ್ಣಗೊಂಡಿದೆ |
| 4 | ಮಡಿಕೇರಿ ನಗರಸಭಾ ವ್ಯಾಪ್ತಿಯ ಟಿ.ವಿ.1 ಕಚೇರಿಗೆ ಹೋಗುವ ರಸ್ತೆಯ ಅರಣ್ಯ ಕಚೇರಿ ಮುಂಭಾಗ ಸ್ಯಾಂಡ್ ಬ್ಯಾಗ್ಸ್ ಅಳವಡಿಸುವ ಕಾಮಗಾರಿ | 80.00 | ಪೂರ್ಣಗೊಂಡಿದೆ |
| 5 | ಮಡಿಕೇರಿ ನಗರಸಭಾ ವ್ಯಾಪ್ತಿಯ ಹಳೇ ಖಾಸಗಿ ಬಸ್ ನಿಲ್ದಾಣದ ಕಟ್ಟಡದ ಹಿಂಭಾಗ ತಡೆಗೋಡೆ ನಿರ್ಮಾಣ ಕಾಮಗಾರಿ | 107.00 | ಪೂರ್ಣಗೊಂಡಿದೆ |
| | ಒಟ್ಟು | 292.00 | |

### 2019-20ನೇ ಸಾಲಿನಲ್ಲಿ ಮಡಿಕೇರಿ ನಗರಸಭೆಗೆ ಮಂಜೂರಾಗಿರುವ ಮಳೆ ಹಾನಿ ಅನುದಾನದಡಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ

| 2019-20ನೇ ಸಾಲಿನ ಕಾಮಗಾರಿಗಳ ವಿವರ | | | |
|---|---|---|---|
| ಕ್ರ.ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಕಾಮಗಾರಿ ಹಂತ |
| 1 | ಮಡಿಕೇರಿ ನಗರಸಭಾ ವ್ಯಾಪ್ತಿಯ ರಾಜಾಸೀಟ್ ರಸ್ತೆಯಲ್ಲಿ ಇಗ್ಲೂ ರೆಸಿಡೆನ್ಸಿ ಮುಂಭಾಗ ಎಸ್.ಪಿ.ಬಂಗಲೆ ಮುಂಭಾಗ-ರಾಡಿಗ್ರಸ್ ಕಟ್ಟಡದವರೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ | 172.90 | ಪೂರ್ಣಗೊಂಡಿದೆ |
| 2 | ಮಡಿಕೇರಿ ನಗರಸಭಾ ವ್ಯಾಪ್ತಿಯ ಇಂದಿರಾ ಕ್ಯಾಂಟಿನ್ ಮುಂಭಾಗದಿಂದ ಸಾಯಿ ಹಾಕಿ ಮೈದಾನದವರೆಗೆ ರಸ್ತೆ | 145.25 | ಪೂರ್ಣಗೊಂಡಿದೆ |
| 3 | ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿನ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿ | 22.00 | ಪೂರ್ಣಗೊಂಡಿದೆ |
| 4 | ಮಡಿಕೇರಿ ನಗರಸಭಾ ವ್ಯಾಪ್ತಿಯ ಎಲ್.ಐ.ಸಿ ಕಚೇರಿ ಮುಂಭಾಗ ತಡೆಗೋಡೆ ನಿರ್ಮಾಣ ಕಾಮಗಾರಿ | 9.85 | ಪೂರ್ಣಗೊಂಡಿದೆ |
| 5 | ಮಡಿಕೇರಿ ನಗರಸಭಾ ವ್ಯಾಪ್ತಿಯ ಹಳೇ ಖಾಸಗಿ ಬಸ್ ನಿಲ್ದಾಣದ ತಡೆಗೊಡೆ ಕಾಮಗಾರಿ | 296.00 | ಪ್ರಗತಿಯಲ್ಲಿದ್ದು ಶೇ50ರಷ್ಟು ಕಾಮಗಾರಿ ಪೂರ್ಣಗೊಂಡಿದೆ |
| | ಒಟ್ಟು | 646.00 | |

Chief Officer
Directorate of Municipal Administration